| ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ –1993ರ ತಿದ್ದುಪಡಿಯಲ್ಲಿನ ಮಹತ್ವದ ಅಂಶಗಳು: | | |
|---|---|---|
| **ಈಗ ಕಾಯಿದೆಯಲ್ಲಿ ಇರುವುದು** | **ತಿದ್ದುಪಡಿ ಮಸೂದೆಯಲ್ಲಿ ಸೂಚಿಸಿರುವುದು** | **ತಿದ್ದುಪಡಿ ಸೂಚಿಸಿರುವುದಕ್ಕೆ ಕಾರಣಗಳು** |
| **ನೇರ ಭಾಗವಹಿಸುವಿಕೆ – ಗ್ರಾಮ ಸಭೆಯನ್ನು ಸಶಕ್ತಗೊಳಿಸುವುದು** | | |
| • ಇಡೀ ಗ್ರಾಮ ಪಂಚಾಯತ್‌ಗೆ ಒಂದು ಗ್ರಾಮ ಸಭೆ | • ಗ್ರಾಮ ಸಭೆಯು ಪ್ರತಿ ಗ್ರಾಮ/ಹಳ್ಳಿಯಲ್ಲೂ ರಚನೆಯಾಗಬೇಕು | • ಸಂವಿಧಾನದಲ್ಲಿ ರೂಪಿಸಿದಂತೆ ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿ ನೇರ ಭಾಗವಹಿಸುವಿಕೆಗೆ |
| • ವಾರ್ಡ್ ಸಭೆ ಮತ್ತು ಗ್ರಾಮ ಸಭೆ | • ವಾರ್ಡ್ ಸಭೆ ಮತ್ತು ಗ್ರಾಮ ಸಭೆಯ ಜೊತೆಗೆ ಜನವಸತಿ ಸಭೆಗಳು | • ನಿರ್ಲಕ್ಷ್ಯಿಸಲ್ಪಟ್ಟ ಪ್ರದೇಶಗಳ / ಜನವಸತಿ ಪ್ರದೇಶಗಳ ನಿವಾಸಿಗಳ ಹೆಚ್ಚಿನ ಭಾಗವಹಿಸುವಿಕೆಗೆ |
| • ಪ.ಜಾ / ಪ.ಪಂ. ಮತ್ತು ಮಹಿಳೆಯರ ವಿಶೇಷ ಗ್ರಾಮ ಸಭೆಗೆ ಅವಕಾಶವಿಲ್ಲ | • ಗ್ರಾಮ ಸಭೆಗೆ ಮುಂಚಿತವಾಗಿ ಪ.ಜಾ / ಪ.ಪಂ.ಗಳ, ಮಹಿಳೆಯರ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆಗೆ ಅವಕಾಶ | • ಪ.ಜಾ / ಪ.ಪಂ.ಗಳ ಮತ್ತು ಮಹಿಳೆಯರ ಸಬಲೀಕರಣ ಮತ್ತು ರಕ್ಷಣೆ |
| **ವಿಕೇಂದ್ರೀಕರಣಕ್ಕೆ ಅಗತ್ಯವಾದ ಅಧಿಕಾರ ವರ್ಗಾವಣೆ ಮತ್ತು ಹಣಕಾಸಿಗೆ ಸಂಬಂಧಿಸಿದಂತೆ ಆಗಲೇ ಬೇಕಾದ ಹಸ್ತಾಂತರ** | | |
| • ಮೂರು ಸ್ಥರಗಳು ಲಂಬ ರಚನೆಯಲ್ಲಿವೆ, ಒಂದು ಅದರ ಕೆಳಗಿನ ಸ್ಥರವನ್ನು ಮೇಲ್ವಿಚಾರಣೆ ಮಾಡುತ್ತವೆ. | • ಪಂಚಾಯತ್‌ನ ಮೂರು ಸ್ಥರಗಳು ಸರಿಸಮಾನವಾಗಿದ್ದು ಸಮತಲ ರಚನೆ ಎಂದು ಪರಿಗಣಿಸಲಾಗಿದೆ. | • ಪ್ರತಿ ಸ್ಥರವು ಅದರ ಪ್ರಾದೇಶಿಕ ವ್ಯಾಪ್ತಿಗೆ ಬರುವ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಶಕ್ತಗೊಳಿಸುವುದಕ್ಕೆ<br>• ಎಲ್ಲಾ ಮೂರು ಸ್ಥರಗಳು ಸಮಾನವಾಗಿ ಗ್ರಾಮ ಸಭೆಗಳಿಗೆ ಉತ್ತರದಾಯಿಗಳು ಮತ್ತು ಬದ್ಧವಾಗಿವೆ<br>• ಮೂರು ಸ್ಥರಗಳ ನಡುವೆ ಜೈವಿಕ ಕೊಂಡಿ ರೂಪಿಸಲು |
| • ಐದು ಸಾವಿರದಿಂದ ಏಳು ಸಾವಿರದ ಜನಸಂಖ್ಯೆಯು ಗ್ರಾಮ ಪಂಚಾಯತ್ ವ್ಯಾಪ್ತಿಯಾಗಿದೆ. | • ಹತ್ತು ಸಾವಿರದಿಂದ ಹದಿನೈದು ಸಾವಿರ ಜನಸಂಖ್ಯೆ | • ಪರಿಣಾಮಕಾರಿ ಆಡಳಿತ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಲು |
| **ಪಂಚಾಯತ್‌ಗಳ ಸಬಲೀಕರಣ** | | |
| • ಗ್ರಾಮ ಪಂಚಾಯತ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರದ ಅವಧಿಯು ಮೂವತ್ತು ತಿಂಗಳು; ಮತ್ತು ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗೆ ಇದು ಇಪ್ಪತ್ತು ತಿಂಗಳು | • ಎಲ್ಲಾ ಸ್ಥರಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿಯು ಪಂಚಾಯತ್‌ನ ಚುನಾವಣಾ ಅವಧಿಗೆ ಸಮವಾಗಿರಬೇಕು ಅಂದರೆ ಐದು ವರ್ಷಗಳು | • ಅಭಿವೃದ್ಧಿ ಮತ್ತು ಆಡಳಿತದಲ್ಲಿ ಸ್ಥಿರತೆ ಮತ್ತು ನಿರಂತರತೆಯನ್ನು ಖಾತ್ರಿಗೊಳಿಸಲು |
| • ಎಲ್ಲಾ ಸ್ಥರಗಳಲ್ಲೂ ಮೀಸಲಾತಿ ಮತ್ತು ಸರದಿಯಾಧಾರಿತ ಸ್ಥಾನಗಳು ಐದು ವರ್ಷಕ್ಕೊಮ್ಮೆ (ಒಂದು ಅವಧಿಗೆ) | • ಎಲ್ಲಾ ಸ್ಥರಗಳಲ್ಲೂ ಮೀಸಲಾತಿ ಮತ್ತು ಸರದಿಯಾಧಾರಿತ ಸ್ಥಾನಗಳು ಹತ್ತು ವರ್ಷಗಳಿಗೊಮ್ಮೆ (ಎರಡು ಅವಧಿಗೆ) | • ಹೆಚ್ಚಿನ ಹೊಣೆಗಾರಿಕೆ, ಮತ್ತು ನಾಯಕತ್ವ ಬೆಳೆಸಲು: ಜನಗಣತಿಯೊಡನೆ ಹೆಜ್ಜೆ ಹಾಕಲು |
| • ಅಧ್ಯಕ್ಷ ಮತ್ತು ಉಪಾಧ್ಯಕ್ಷರ ರಾಜೀನಾಮೆಗೆ ಯಾವುದೇ ಷರತ್ತುಗಳಿಲ್ಲ. | • ರಾಜ್ಯ ಚುನಾವಣಾ ಆಯೋಗವು ಅನುಮೋದನೆ ಮಾಡಿದ ಸಮರ್ಥ ಅಧಿಕಾರಿಗಳಿಂದ ಪ್ರಮಾಣೀಕರಿಸಿದ ಸಾಬೀತಾದ ಅನಾರೋಗ್ಯ ಕಾರಣಕ್ಕೆ ಕೇವಲ ಒಂದು ಬಾರಿ ಮಾತ್ರ ರಾಜೀನಾಮೆ. | • ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಕರ್ತವ್ಯದಲ್ಲಿ ಅಸ್ಥಿರತೆ ತರಲು ತರಲು ಹಣಬಲ ಉಪಯೋಗಿಸುವುದನ್ನು ತಡೆಯಲು |
| • ಗ್ರಾಮ ಪಂಚಾಯತ್‌ನಲ್ಲಿ ಅವಿಶ್ವಾಸ ಗೊತ್ತುವಳಿ ಮಂಡನೆ ಒಂದು ವರ್ಷದ ನಂತರ, ತಾಲೂಕು ಮತ್ತು ಜಿಲ್ಲಾ | • ಮೊದಲ ಮೂವತ್ತು ತಿಂಗಳು ಅವಿಶ್ವಾಸ ಗೊತ್ತುವಳಿ ಮಂಡಿಸುವಂತಿಲ್ಲ ಮತ್ತು ಅದರ ನಂತರ, ಅಧಿಕಾರವನ್ನು | • - ಮೇಲಿನಂತೆ– |

| | | |
|---|---|---|
| ಪಂಚಾಯತ್‌ಗಳಲ್ಲಿ ಇದು ಆರು ತಿಂಗಳ ನಂತರ | ದುರುಪಯೋಗಪಡಿಸಿಕೊಂಡ ನಿರ್ದಿಷ್ಟ ದೂರುಗಳ ಆಧಾರದ ಮೇಲೆ ಮಾತ್ರ | |
| • ಎಲ್ಲಾ ಸ್ಥರಗಳಲ್ಲೂ ಪಂಚಾಯತ್ ಸದಸ್ಯರನ್ನು ಹಿಂಪಡೆಯಲು ಶಿಫಾರಸ್ಸು ಮಾಡಲು ಅಥವಾ ತೆಗೆದುಹಾಕಲು ಯಾವುದೇ ಅಧಿಕಾರವಿಲ್ಲ | • ರಾಜ್ಯ ಚುನಾವಣಾ ಆಯೋಗಕ್ಕೆ ಗ್ರಾಮ ಪಂಚಾಯತ್ ಸದಸ್ಯರನ್ನು ಹಿಂಪಡೆಯಲು ಶಿಫಾರಸ್ಸು ಮಾಡುವ; ಮತ್ತು ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರನ್ನು ತೆಗೆದುಹಾಕುವ ಅವಕಾಶ | • ಚುನಾಯಿತ ಸದಸ್ಯರು ಅವರ ಕ್ಷೇತ್ರಕ್ಕೆ / ಮತದಾರರಿಗೆ ಹೆಚ್ಚಿನ ಉತ್ತರದಾಯಿಯಾಗಿರುವುದನ್ನು ಖಚಿತಗೊಳಸಲು |
| **ಹಣಕಾಸಿನ ಹಸ್ತಾಂತರ** | | |
| • ಚಟುವಟಿಕೆ ನಕ್ಷೆ | • ಜವಾಬ್ದಾರಿ ನಕ್ಷೆ | • ಮೂರು ಸ್ಥರಗಳು ನಿರ್ವಹಿಸುವ ಪ್ರತಿಯೊಂದು ಕಾರ್ಯಗಳನ್ನು (ಹೊಣೆಗಳನ್ನು) ವಿವರಿಸಲು<br>• ಗ್ರಾಮ ಸಭೆಗಳ ಹೊಣೆಗಳು, ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಸೇರಿಸಿಕೊಳ್ಳಲು<br>• ಇಡೀ ಸಂಸ್ಥೆಯನ್ನು ಸಂಯೋಜಿಸಿ ಪಂಚಾಯತ್ ರಾಜ್ಯ ಸಂಸ್ಥೆಯ ಸೂಕ್ತ ಸ್ಥರಕ್ಕೆ ಹೊಣೆಗಾರರನ್ನು ಮತ್ತು ಹಣಕಾಸನ್ನು ಹಸ್ತಾಂತರಿಸಲು |
| • ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಬೇಕಾದ ಹಣಕಾಸುಗಳ (ಅನುದಾನಗಳ) ಬಗ್ಗೆ ಯಾವುದೇ ಪರಿಮಾಣವಿಲ್ಲ | • ರಾಜ್ಯ ಆಯವ್ಯಯದಲ್ಲಿ ಯೋಜನಾ ಹಂಚಿಕೆಯ ಶೇಕಡಾ ಮೂವತ್ತನ್ನು ಮೀಸಲರಿಸಬೇಕು ಮತ್ತು ಮೀಸಲರಿಸಿದ ಇದರಲ್ಲಿ ಶೇಕಡಾ ಐವತ್ತು ಮುಕ್ತ ನಿಧಿ (ಅನಿರ್ಬಂದಿತ ಅನುದಾನ)ವಾಗಿರಬೇಕು | • ವಿಕೇಂದ್ರೀಕೃತ ಯೋಜನೆಗೆ ಹೆಚ್ಚಿನ ಅನುದಾನ ಹಂಚಿಕೆ |
| • ಪಂಚಾಯತ್‌ಗಳಿಗೆ ಏಕರೂಪದ ಅನುದಾನ ಹಂಚಿಕೆ | • ಪ್ರತಿ ಪಂಚಾಯತ್‌ಗೂ ಅನುದಾನದ ಪರಿಮಾಣವನ್ನು ನಿರ್ಧರಿಸಲು ಆಧ್ಯತಾ ಶ್ರೇಣಿಯ ಮ್ಯಾಟ್ರಿಕ್ಸ್ | • ಪಂಚಾಯತ್‌ನ ಗಾತ್ರ, ಹಿಂದುಳಿಯುವಿಕೆ, ಭೌಗೋಳಿಕ ಪರಿಸ್ಥಿತಿ ಇತ್ಯಾದಿಗಳನ್ನು ಆಧರಿಸಿ ಆಧ್ಯತಾವಾರು ಹಂಚಿಕೆಯನ್ನು |
| • ಯೋಜನೆಗಳಿಗೆ ಪೂರ್ವನಿರ್ಧರಿತ ಆಯವ್ಯಯ ಪಟ್ಟಿ | • ಅನುದಾನದ (ಹಣಕಾಸಿನ) ಎಲ್ಲಾ ಹಸ್ತಾಂತರವು ನೇರವಾಗಿ ಪಂಚಾಯತ್ ಖಾತೆಗೆ ಠೇವಣಿಯಾಗಬೇಕು | • 'ಒಂದು ಗಾತ್ರ ಎಲ್ಲರಿಗೂ ಹೊಂದಿಕೊಳ್ಳುತ್ತದೆ' ಎಂಬುದರಿಂದ ದೂರವಾಗಲು; ಹೆಚ್ಚಿನ ಸಬಲೀಕರಣ ಮತ್ತು ವಿಕೇಂದ್ರೀಕರಣಕ್ಕೆ ಆಯವ್ಯಯ |
| **ಹೊಣೆಗಾರರ (ಕಾರ್ಯನಿರ್ವಾಹಕರ) ಆಡಳಿತಾತ್ಮಕ ಹಸ್ತಾಂತರ** | | |
| • ಇಲಾಖೆಗಳ ಸಿಬ್ಬಂದಿಗಳು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ | • ಆಯಾ ಸ್ಥರದ ಎಲ್ಲಾ ಹೊಣೆಗಾರರು (ಕಾರ್ಯನಿರ್ವಾಹಕರು) ಆಯಾ ಪಂಚಾಯತ್‌ಗಳ ಕಾರ್ಯಕ್ರಮಗಳ ಅಗತ್ಯಕ್ಕನುಗುಣವಾಗಿ ಪಂಚಾಯತ್‌ಗಳಿಗೆ ಹಸ್ತಾಂತರವಾಗಬೇಕು | • ಸಂಪೂರ್ಣ ವಿಕೇಂದ್ರೀಕರಣವನ್ನು ಖಚಿತಪಡಿಸಲು ಸಂಬಂಧಿಸಿದ ಎಲ್ಲಾ ಇಲಾಖೆಗಳ ಮತ್ತು ಪ್ಯಾರಾ-ಸ್ಟೇಟಲ್ ಸಂಸ್ಥೆಗಳ ಸಿಬ್ಬಂದಿಗಳನ್ನು ಸೂಕ್ತ ಪಂಚಾಯತ್‌ಗಳೊಡನೆ ಸಂಯೋಜಿಸಲು |
| • ಯಾವುದೇ ಪ್ರತ್ಯೇಕ ಪಂಚಾಯತ್ ರಾಜ್ ಆಡಳಿತ ಸೇವೆಯಿಲ್ಲ | • "ಕರ್ನಾಟಕ ಪಂಚಾಯತ್ ಆಡಳಿತ ಸೇವೆ" ಎಂಬ ಪ್ರತ್ಯೇಕ ಸೇವಾ ಕೇಡರ್ ಸ್ಥಾಪನೆ ಮತ್ತು ಪಂಚಾಯತ್ ಸೇವಾ ಮಂಡಳ ಮತ್ತು ನೇಮಕಾತಿ ಮಂಡಳ' ಎಂಬ ಸ್ವತಂತ್ರ ಮಳಡಳಿಯ ಸ್ಥಾಪನೆ | • ಪಂಚಾಯತ್ ರಾಜ್ ಸಂಸ್ಥೆಗಳ ಮಾನವ ಸಂಪನ್ಮೂಲ ಅಗತ್ಯತೆಗಳನ್ನು ಪೂರೈಸಲು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯ ಆಡಳಿತ ನೀತಿ (ಪಾಲಿಸಿ)ಯನ್ನು ವ್ಯಾಖ್ಯಾನಿಸಲು |

| | | |
|---|---|---|
| **ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿ** | | |
| • ಯಾವುದೇ ಪ್ರತ್ಯೇಕ ಅವಕಾಶವಿಲ್ಲ | • ಎಲ್ಲಾ ಮೂರು ಸ್ಥರಗಳ ಚುನಾಯಿತ ಸದಸ್ಯರು ಮತ್ತು ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿಗೆ ರಾಜ್ಯ ಸರ್ಕಾರದಿಂದ ಪ್ರತ್ಯೇಕಅನುದಾನ ಹಂಚಿಕೆಗೆ ಆಯವ್ಯಯ ರೂಪಿಸುವುದು | • ಅವರ ಜವಾಬ್ದಾರಿಯನ್ನು ಪೂರ್ತಿಗೊಳಿಸಲು ಅಗತ್ಯವಾದ ಜ್ಞಾನ, ಮನೋಭಾವ ಮತ್ತು ಕೌಶಲ್ಯಗಳನ್ನು ನೀಡಲು |
| • ಅಸ್ಥಿತ್ವದಲ್ಲಿಲ್ಲ | •'ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಮತ್ತು ತಾಂತ್ರಿಕ ಸೇವೆಗಳ ಮಂಡಳಿ'ಯ ಸ್ಥಾಪನೆ | • ಪಂಚಾಯತ್‌ಗಳ ಆಡಳಿತಕ್ಕೆ ಸುಸಜ್ಜಿತ ಮತ್ತು ದಕ್ಷ ಸಿಬ್ಬಂದಿಗಳನ್ನು ಒದಗಿಸಲು |
| **ಯೋಜನೆ** | | |
| • ರಾಜ್ಯಮಟ್ಟದಲ್ಲಿ ಪ್ರತ್ಯೇಕ ಯೋಜನಾ ಮಂಡಳಿ ಇಲ್ಲ | • 'ಕರ್ನಾಟಕ ರಾಜ್ಯ ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಮಂಡಳಿ' ಸ್ಥಾಪನೆ. ಈ ಮಂಡಳಿಗೆ ಯೋಜನಾ ಮಂತ್ರಿಗಳು ಅಧ್ಯಕ್ಷರಾಗಿ ಮತ್ತು ಸಹ–ಅಧ್ಯಕ್ಷರಾಗಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಇರುತ್ತಾರೆ. | • ಜಿಲ್ಲಾ ಯೋಜನಾ ಸಮಿತಿಯು ಸಲ್ಲಿಸಿದ ಕರಡು ಯೋಜನೆಗಳನ್ನು ರಾಜ್ಯ ಯೋಜನೆಯಲ್ಲಿ ಪರಿಣಾಮಕಾರಿಯಾಗಿ ಸಂಯೋಜಿಸಲು ಮತ್ತು ಅನುಷ್ಠಾನಗೊಳಿಸಲು |
| • ತಾಲೂಕು ಮಟ್ಟದಲ್ಲಿ ಯೋಜನಾ ಸಮಿತಿ ಇಲ್ಲ | • ತಾಲೂಕು ಮಟ್ಟದಲ್ಲಿ 'ತಾಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿ'ಯ ಸ್ಥಾಪನೆ | • ಗ್ರಾಮ ಪಂಚಾಯತ್‌ಗಳು, ತಾಲೂಕು ಪಂಚಾಯತ್‌ಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಕರಡು ಯೋಜನೆಗಳನ್ನು ಪರಿಣಾಮಕಾರಿಯಾಗಿ ಕ್ರೋಢೀಕರಿಸಲು ಮತ್ತು ಅವುಗಳನ್ನು ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸಲು |
| • ಅಸ್ಥಿತ್ವದಲ್ಲಿಲ್ಲ | • 'ಆಧ್ಯತಾ ಶ್ರೇಣಿ' ಮಾತೃಕೆಯನ್ನು ಉಪಯೋಗಿಸಿ ಜನವಸತಿ ಮಟ್ಟದಿಂದ ಪ್ರಾರಂಭವಾಗುವ ಯೋಜನಾ ಪ್ರಕ್ರಿಯೆಯು ತಳಮಟ್ಟದಿಂದ ಪ್ರಾರಂಭವಾಗುವ ವಿಧಾನವಾಗುತ್ತದೆ. | • ಪ್ರತಿ ಗುಂಪಿನ ಅಗತ್ಯದ ಆಧಾರದಲ್ಲಿ ಯೋಜನೆಗಳನ್ನು ಮಾಡಲಾಗಿದೆ ಮತ್ತು ಅನುದಾನದ ಹಂಚಿಕೆಯು ಯುಕ್ತವಾದ ಆಧ್ಯತೆ ನೀಡಲಾಗಿದೆ ಎಂದು ಖಚಿತ ಪಡಿಸಿಕೊಳ್ಳಲು |
| **ಪ.ಜಾ/ಪ.ಪಂ. ಮತ್ತು ಇತರ ಹಿಂದುಳಿದ ಸಮುದಾಯಗಳಿಗೆ ವಿಶೇಷ ಅಧಿಕಾರಗಳು** | | |
| • ಅಸ್ಥಿತ್ವದಲ್ಲಿಲ್ಲ | • ಪ.ಜಾ/ಪ.ಪಂ.ಗಳಿಗೆ ಅವರ ಜನಸಂಖ್ಯೆಯ ಅನುಪಾತದಲ್ಲಿ ಆಯವ್ಯಯ | • ದುರ್ಬಲ ವರ್ಗಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ಅವರ ಅಗತ್ಯತೆಗಳನ್ನು ಗೌರವಿಸಲು |
| • ಅಸ್ಥಿತ್ವದಲ್ಲಿಲ್ಲ | • ಅವರ ಆಯವ್ಯಯ ಹಂಚಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳಲು ಪ.ಜಾ/ಪ.ಪಂ.ಗಳಿಗೆ ವಿಶೇಷ ಗ್ರಾಮ ಸಭೆ | • |
| • ಅಸ್ಥಿತ್ವದಲ್ಲಿಲ್ಲ | • ಪ್ರತಿ ಜಿಲ್ಲೆಯಲ್ಲೂ 'ಜಿಲ್ಲಾ ಪಂಚಾಯತ್ ನ್ಯಾಯಾಲಯ (ಟ್ರಿಬ್ಯುನಲ್)' ಸ್ಥಾಪನೆ | • ಸಂಕಷ್ಟಗಳನ್ನು (ಕುಂದುಕೊರತೆಗಳನ್ನು) ಪರಿಹರಿಸಲು ಮತ್ತು ವಿವಾದಗಳನ್ನು ಬಗೆಹರಿಸಲು |
| **ಚುನಾವಣಾ ನಿಯಮಾವಳಿ** | | |
| • ಸರ್ಕಾರದ ಅಧಿಕಾರಿಗಳಿಂದ ಚುನಾವಣೆ ಹಾಗೂ ಮೀಸಲಾತಿ ಮತ್ತು ಸ್ಥಾನದ ಹಂಚಿಕೆ | • ಸ್ಥಾನಗಳ ಮೀಸಲಾತಿ, ಹಂಚಿಕೆ ಮತ್ತು ಚುನಾವಣೆಗಳನ್ನು ನಡೆಸುವುದು ರಾಜ್ಯ ಚುನಾವಣಾ ಆಯೋಗ | • ರಾಜಕೀಯ ಮಧ್ಯಪ್ರವೇಶವನ್ನು ತಪ್ಪಿಸಲು (ಹಸ್ತಕ್ಷೇಪ)<br>• |

| | | |
|---|---|---|
| • ಪಂಚಾಯತ್ ಚುನಾವಣೆಗಳಿಗೆ ರಾಜ್ಯ ಅನುದಾನದ ನಿಯಮ | • ಪಂಚಾಯತ್ ಚುನಾವಣೆಗಳಿಗೆ ರಾಜ್ಯ ಅನುದಾನ | • ಹಣ ಮತ್ತು ಭುಜಬಲವನ್ನು ತೊಡೆದುಹಾಕಲು |
| • ಚುನಾವಣೆಗೆ ಬಹು ಸದಸ್ಯ ಕ್ಷೇತ್ರದ ಸದಸ್ಯತ್ವಕ್ಕಾಗಿ ಗ್ರಾಮ ಪಂಚಾಯತ್‌ಗಳ ಗಡಿ ನಿರ್ಧಾರ | • ಏಕ ಸದಸ್ಯ ಕ್ಷೇತ್ರ | • ಸಾಮಾಜಿಕ ನ್ಯಾಯದೊಂದಿಗೆ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆ |
| **<u>ಲಿಂಗ ಸೂಕ್ಷ್ಮತೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳು</u>** | | |
| • ಆ ರೀತಿಯ ಯಾವುದೇ ನಿಯಮಗಳು ಅಸ್ಥಿತ್ವದಲ್ಲಿಲ್ಲ. | • ಪಂಚಾಯತ್‌ನಲ್ಲಿ ಪ್ರತ್ಯೇಕ ಶೌಚಾಲಯಗಳು, ಬಾಣಂತಿಯರು ಮತ್ತು ಮಕ್ಕಳ ಆರೈಕೆಗಾಗಿ ಶಿಶುಧಾಮಗಳನ್ನು ಒದಗಿಸುವುದು | • ಲಿಂಗ ಸೂಕ್ಷ್ಮತೆಯ ವಿಷಯಗಳಿಗೆ ಹೆಚ್ಚಿನ ಗಮನ ನೀಡಲು<br>• |
| • ಇದು ಅಸ್ಥಿತ್ವದಲ್ಲಿಲ್ಲ | • ಎಲ್ಲಾ ಸ್ಥರಗಳಲ್ಲಿ ಅಧ್ಯಕ್ಷರಿಗೆ ಖಾಸಗಿ ಕಾರ್ಯದರ್ಶಿಗಳನ್ನು ಒದಗಿಸುವುದು | • ಅನಕ್ಷರಸ್ಥ ಮತ್ತು ಅರೇ ಸಾಕ್ಷರತಾ ಮಹಿಳೆಯರು ತಮ್ಮ ಹೊಣೆಯನ್ನು ಉತ್ತಮವಾಗಿ ನಡೆಸುವಂತೆ ಸಶಕ್ತಗೊಳಿಸಲು |
| • ಇದು ಅಸ್ಥಿತ್ವದಲ್ಲಿಲ್ಲ | • ಈ ಖಾಸಗಿ ಕಾರ್ಯದರ್ಶಿಗಳೂ ಸಹ ಸಾಮರ್ಥ್ಯಾಭಿವೃದ್ಧಿ ತರಬೇತಿಗಳಿಗೆ ಒಳಗಾಗುತ್ತಾರೆ. | • ಇದರಿಂದಾಗಿ ಅವರು ಅಧ್ಯಕ್ಷರಿಗೆ ಸೂಕ್ತ ಬೆಂಬಲ ನೀಡುವಂತೆ ಸುಸಜ್ಜಿತಗೊಳಿಸಲು |
| • ಇದಕ್ಕಾಗಿ ಪ್ರತ್ಯೇಕ ನೀತಿಯಿಲ್ಲಿ. | • ಮಹಿಳೆಯರ ಲೈಂಗಿಕ ಶೋಷಣೆಯ ಕಾಯ್ದೆ–2014ನ್ನು ಅನುಷ್ಠಾನಗೊಳಿಸುವುದು. | • ಲೈಂಗಿಕ ಶೋಷಣೆಯಿಂದ ಪಂಚಾಯತ್ ಮಹಿಳಾ ಸದಸ್ಯರಿಗೆ ಕಾನೂನಿನ ರಕ್ಷಣೆ ನೀಡಲು |
| • ಆ ರೀತಿಯ ಯಾವುದೇ ನಿಯಮ ಅಸ್ಥಿತ್ವದಲ್ಲಿಲ್ಲ. | • ಮಹಿಳೆಯರಿಗಾಗಿ ತಾಲೂಕು ಮಟ್ಟದಲ್ಲಿ ಸಹಕಾರಿ ಬ್ಯಾಂಕ್‌ಗಳ ಸ್ಥಾಪನೆ ಮತ್ತು ಬ್ಯಾಂಕ್‌ನ ಪದನಿಮಿತ್ತ ನಿರ್ದೇಶಕರಾಗಿ ತಾಲೂಕು ಪಂಚಾಯತ್‌ನ ಮೂವರು ಮಹಿಳಾ ಸದಸ್ಯರ ನಾಮನಿರ್ದೇಶನ ಮಾಡುವುದು. | • ತಾಲೂಕು ಮಟ್ಟದಲ್ಲಿ ಮಹಿಳಾ ಸ್ವ–ಸಹಾಯ ಗುಂಪುಗಳ ಸಬಲೀಕರಣ ಮತ್ತು ಉತ್ತಮ ಮೇಲ್ವಿಚಾರಣೆ ಮತ್ತು ಪಾರದರ್ಶಕತೆಗಾಗಿ ತಾಲೂಕ್ ಪಂಚಾಯತ್‌ನೊಂದಿಗೆ ಜೈವಿಕ ಕೊಂಡಿಯನ್ನು ಬೆಳೆಸಲು |